Reg. No. | | | | | | | | |

# KNH 451

**ಎರಡನೇ ಸೆಮಿಸ್ಟರ್ ಎಂ.ಎ. ಪದವಿ ಪರೀಕ್ಷೆ, ಸೆಪ್ಟೆಂಬರ್/ಅಕ್ಟೋಬರ್ 2022**
**ಕನ್ನಡ**
**ಮಧ್ಯಕಾಲೀನ ಕನ್ನಡ ಸಾಹಿತ್ಯ : ಭಾಗ - 2, ಕೀರ್ತನೆ, ತತ್ವಪದ, ಷಟ್ಪದಿ, ಸಾಂಗತ್ಯ**
**(ಆಯ್ಕೆ ಆಧಾರಿತ ಮೌಲ್ಯಾಂಕ ಪದ್ಧತಿ)**

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 70

1. ಮಧ್ಯಕಾಲೀನ ಕನ್ನಡ ಸಾಹಿತ್ಯಕ್ಕೆ ಹಿನ್ನಲೆ ಮತ್ತು ಪ್ರೇರಣೆಯಾಗಿರುವ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ವಿದ್ಯಮಾನಗಳನ್ನು ಕುರಿತು ಬರೆಯಿರಿ. **15**

**ಅಥವಾ**

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಭಕ್ತಿಯ ಸ್ವರೂಪವನ್ನು ಕುರಿತು ಬರೆಯಿರಿ.

2. ಕನಕದಾಸರ ಕೀರ್ತನೆಗಳ ವೈಶಿಷ್ಟ್ಯವನ್ನು ಕುರಿತು ಬರೆಯಿರಿ. **15**

**ಅಥವಾ**

ಶಿಶುನಾಳರ ತತ್ವಪದಗಳ ಮಹತ್ವವೇನು ? ವಿಶ್ಲೇಷಿಸಿ.

3. 'ಭೋಗ-ಯೋಗ'ದ ಸಮನ್ವಯತೆಯು 'ಭರತೇಶ ವೈಭವ'ದಲ್ಲಿ ಅಭಿವ್ಯಕ್ತಗೊಂಡಿರುವ ಬಗೆಯನ್ನು ವಿವರಿಸಿ. **15**

**ಅಥವಾ**

'ಕುಮಾರವ್ಯಾಸ ಭಾರತ'ದಲ್ಲಿ ಅನಾವರಣಗೊಂಡಿರುವ ಕರ್ಣ ಮತ್ತು ಕೃಷ್ಣನ ಪಾತ್ರವನ್ನು ವಿಶ್ಲೇಷಿಸಿ.

4. **ಒಂದು** ಪದ್ಯದ ಭಾವಾರ್ಥ ಹಾಗೂ ಸ್ವಾರಸ್ಯವನ್ನು ವಿವರಿಸಿ. **10**

ಅ) ''ತಲ್ಲಣಿಸದಿರು ಕಂಡು ತಾಳು ಮನವೆ ॥
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ।
ಬೆಟ್ಟದಾ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ ।
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ ।
ಹುಟ್ಟಿಸಿದ ದೇವತಾ ಹೊಣೆಗಾರನಾಗಿರಲು ।
ಗುಟ್ಟಾಗಿ ಸಲಹುವನು ಇದಕೆ ಸಂಶಯವಿಲ್ಲ ।''

**ಅಥವಾ**

ಪು.ತಿ.ನೋ.

ಆ) ''ನನ್ನೊಳಗೆ ನಾ ತಿಳಿಕೊಂಡೆ । ನನಗೆ ಬೇಕಾದ ಗಂಡನ್ನ ಮಾಡಿಕೊಂಡೆ ।।
ಆಜ್ಞಾ ಪ್ರಕಾರ ನಡೆಕೊಂಡೆ । ನಾ ಎಲ್ಲಾರ ಹಂಗೊಂದು ಹರಕೊಂಡೆ ।।
ಆರು ಮಕ್ಕಳನಡುವಿಗಟ್ಟಿ । ಮೂರ ಮಕ್ಕಳ ಬಿಟ್ಟುಗೊಟ್ಟೆ ।
ಇವನ ಮೇಲೆ ಮನವಿಟ್ಟೆ । ಎನ್ನ ಬದುಕು ಬಾಳೆವೆಲ್ಲಾ ಬಿಟ್ಟುಗೊಟ್ಟೆ ।।''

5. **ಮೂರಕ್ಕೆ** ಟಿಪ್ಪಣಿ ಬರೆಯಿರಿ. **(5+5+5=15)**

ಅ) ಷಟ್ಪದಿ

ಆ) ಸಾಂಗತ್ಯ

ಇ) ಗ್ರಂಥ ಸಂಪಾದನೆ

ಈ) ರತ್ನಾಕರವರ್ಣಿ

ಉ) ಸೂಫಿಸಂತರು

ಊ) ಸಾಂಗತ್ಯಕಾರರು.